Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in** **principal@klsvdit.edu.in**

Date: 10-09-2022

**ಪತ್ರಿಕಾ ಪ್ರಕಟಣೆ:**

## ಹಿರಿಯ ನಾಗರಿಕರಿಗಾಗಿ ಕಾರ್ಯಗಾರ

ಕೆ.ಎಲ್.ಎಸ್. ವಿ. ಡಿ. ಐ. ಟಿ. ಹಳಿಯಾಳದಲ್ಲಿ ಹಿರಿಯ ನಾಗರಿಕರಿಗೋಸ್ಕರ ಅಂತರ್ಜಾಲ ಮತ್ತು ಮೊಬೈಲ್ ಸದ್ಬಳಕೆ ಕುರಿತು ಒಂದು ದಿನದ ಕಾರ್ಯಾಗಾರವನ್ನು ಸೆಪ್ಟೆಂಬರ್ 10ರಂದು ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಹಳಿಯಾಳದ ಹಿರಿಯ ನಾಗರಿಕರ ವೇದಿಕೆಯ ಅಧ್ಯಕ್ಷರಾದ ಶ್ರೀ. ಜಿ.ಡಿ.ಗಂಗಧರ್ ಅವರು" ಆಧುನಿಕ ಯುಗದಲ್ಲಿ ಮೊಬೈಲ್ ಜೀವನದ ಅವಿಭಾಜ್ಯ ಅಂಗವಾಗಿದ್ದು, ವಯೋವೃದ್ಧರು ಇದರ ಬಗ್ಗೆ ಕನಿಷ್ಠ ತಿಳುವಳಿಕೆ ಹೊಂದುವುದು ಅವಶ್ಯವಾಗಿದೆ ಎಂದು ಹೇಳಿದರು. ಬೇರೆ ಊರುಗಳಲ್ಲಿ ನೆಲೆಸಿರುವ ಮಕ್ಕಳು,ಸಂಬಂಧಿಕರೊಂದಿಗೆ ಸಂವಹನ ನಡೆಸಲು ಅಂತರ್ಜಾಲ ಬಹುಮುಖ್ಯವಾಗಿದ್ದು, ಇದರ ಮಾಹಿತಿ ಹೊಂದುವುದು ಅನಿವಾರ್ಯವಾಗಿದೆ ಎಂದು ನುಡಿದರು". ಅಧ್ಯಕ್ಷತೆವಹಿಸಿ ಮಾತನಾಡಿದ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ವಿ.ಎ. ಕುಲಕರ್ಣಿ ಅವರು ಹಿರಿಯ ನಾಗರಿಕರು ಅಂತರ್ಜಾಲ ಬಳಕೆ ಕಲಿಯುವುದರಿಂದ ಹಲವಾರು ಉಪಯುಕ್ತ ಮಾಹಿತಿಯನ್ನು ಕೂತಲ್ಲಿಯೇ ತಿಳಿದುಕೊಳ್ಳಬಹುದು, ವೃದ್ಧಾಪ್ಯದಲ್ಲಿ ಸಮಯ ನಿರ್ವಹಣೆಗೆ ಮೊಬೈಲ್ ತುಂಬಾ ಸಹಕಾರಿಯಾಗುವುದು ಎಂದು ನುಡಿದರು. ಈ ದಿಸೆಯಲ್ಲಿ ಮಹಾವಿದ್ಯಾಲಯ ಹಾಗೂ ಹಳಿಯಾಳದ ಹಿರಿಯ ನಾಗರಿಕರ ವೇದಿಕೆಯ ಜಂಟಿ ಸಹಯೋಗದಲ್ಲಿ ಈ ಕಾರ್ಯಾಗಾರವನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥರಾದ ಪ್ರೊ.ಪೂರ್ಣಿಮಾ ರಾಯ್ಕರ್ ಸ್ವಾಗತಿಸಿದರು. ಪ್ರೊ. ಅಭಯ್ ಇಂಚಲ್ ಕಾರ್ಯಾಗಾರದ ಕಿರುಪರಿಚಯ ನೀಡಿದರು. ಪ್ರೊ.ಫರಜಾನಾ ನದಾಫ್ ವಂದಿಸಿದರು. ಪ್ರೊ. ರವೀಂದ್ರ ಪಾಟೀಲ್ ನಿರೂಪಿಸಿದರು. ಒಂದು ದಿನದ ಈ ಕಾರ್ಯಾಗಾರದಲ್ಲಿ ಮೊಬೈಲ್ ನಲ್ಲಿ ಕ್ಯಾಲೆಂಡರ್ ಬಳಕೆ, ಅಂತರ್ಜಾಲದ ಬಳಕೆ, ಗೂಗಲ್ ಮ್ಯಾಪ್ ಬಳಸುವ ಪರಿ, ವಾಟ್ಸಾಪ್ ಬಳಕೆಯ ಮಾಹಿತಿಗಳನ್ನು ನೀಡಲಾಯಿತು. ಮಹಾವಿದ್ಯಾಲಯದ ಎಲ್ಲಾ ಡೀನ್ ಹಾಗೂ ವಿವಿಧ ಭಾಗದ ಮುಖ್ಯಸ್ಥರುಗಳು, ಬೋಧಕ ಸಿಬ್ಬಂದಿಗಳು ಉಪಸ್ಥಿತರಿದ್ದರು, 60ಕ್ಕೂ ಅಧಿಕ ಹಿರಿಯ ನಾಗರಿಕರು ಪಾಲ್ಗೊಂಡಿದ್ದರು. ಮಹಾವಿದ್ಯಾಲಯದ ಕಂಪ್ಯೂಟರ್ ಸೈನ್ಸ್ ವಿಭಾಗವು ಈ ಕಾರ್ಯಕ್ರಮವನ್ನು ನಿರ್ವಹಣೆ ಮಾಡಿತು.

ಪ್ರಾಂಶುಪಾಲರು

**Principal**
**KLS Vishwanathrao Deshpande**
**Institute of Technology, Haliyal**


ATAK LAW SOCIETY'S
ATHRAO DESHPANDE
TE OF TECHNOLOGY
HALIYAL
ಕರ್ನಾಟಕ ಲಾ
ಹಳಿಯಾಳ